ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ
ಸಂಖ್ಯೆ:..............
17 DEC 2022
ಕೇಂದ್ರ ಕಛೇರಿ
ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳ ಹಾಗೂ ಪಂಪ್ ಸೆಟ್ ಮತ್ತು ಪೂರಕ ಸಾಮಾಗ್ರಿಗಳ ಸರಬರಾಜು ಪರಿಶೀಲನೆ ಮಾಡುವ ಪದ್ಧತಿಯಲ್ಲಿ ಮಾರ್ಪಾಡು ಮಾಡುವ ಬಗ್ಗೆ.

**ಓದಲಾಗಿದೆ**
1. ಸರ್ಕಾರದ ಆದೇಶ ಸಂಖ್ಯೆ:ಸಕಇ 149 ಎಸ್‌ಡಿಸಿ 2017, ದಿನಾಂಕ:22.04.2017
2. ಸರ್ಕಾರದ ಆದೇಶ ಸಂಖ್ಯೆ:ಸಕಇ 96 ಎಸ್‌ಡಿಸಿ 2022, ದಿನಾಂಕ:09.09.2022.
3. ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರ ಏಕ ಕಡತ ಸಂಖ್ಯೆ: ADCL/GKS/GVTC/1/2022(934664).

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
ಕ್ರಮ ಸಂ :..............
ದಿನಾಂಕ : 12/12/22
ಉ.ನಿ. | ಜಂ.ನಿ. |
ಶಾಖೆ: | ಶಾಖೆ: |

****

**ಪ್ರಸ್ತಾವನೆ:**

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

ಮೇಲೆ ಓದಲಾದ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳ ಹಾಗೂ ಪಂಪ್ ಸೆಟ್ ಹಾಗೂ ಪೂರಕ ಸಾಮಾಗ್ರಿಗಳ ಸರಬರಾಜು ಪರಿಶೀಲನೆ ಮಾಡಲು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಶೇ.100ರಷ್ಟು, ಜಿಲ್ಲಾ ವ್ಯವಸ್ಥಾಪಕರು ಶೇ.50ರಷ್ಟು ಮತ್ತು ಉಪ ಪ್ರಧಾನ ವ್ಯವಸ್ಥಾಪಕರು ಶೇ.10ರಷ್ಟು ಪರಿಶೀಲನೆ ಮಾಡಿ ಡಿಜಿಟಲ್ ಭಾವ ಚಿತ್ರದೊಂದಿಗೆ ವರದಿ ಸಲ್ಲಿಸುವುದು ಎಂದು ಆದೇಶಿಸಲಾಗಿತ್ತು.

ಮೇಲೆ ಓದಲಾದ ಉಲ್ಲೇಖ(2)ರಲ್ಲಿ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಬಡ ರೈತರಿಗೆ ಕೊಳವೆ ಬಾವಿ ಕೊರೆಸಿ ಪಂಪ್ ಮತ್ತು ಪೂರಕ ಸಾಮಗ್ರಿಗಳನ್ನು ಅಳವಡಿಸಿ ವಿದ್ಯುದ್ದೀಕರಣಗೊಳಿಸುವ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಿಂದ ಪೂರೈಕೆಯಾದ ಸಾಮಗ್ರಿಗಳನ್ನು ಅದಾಗಲೇ ಮೂರನೇ ತಪಾಸಣಾ ಸಂಸ್ಥೆಯವರು ಪೂರ್ವ ಹಾಗೂ ಪೂರ್ವೋತ್ತರ ಪರೀಕ್ಷೆ ನಡೆಸಿ ವರದಿ ಸಲ್ಲಿಸುತ್ತಿರುವುದರಿಂದ, ಜಿಲ್ಲಾ ಹಾಗೂ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿ ರೈತರ ಸಮ್ಮುಖದಲ್ಲಿ ಸರಬರಾಜಿನ ಅಂಕಿ ಸಂಖ್ಯೆಯ ಪ್ರಮಾಣವನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಅದೇ ಸಾಮಗ್ರಿಗಳ ಮರು ತಪಾಸಣೆಯನ್ನು ತಾಂತ್ರಿಕ ನೈಪುಣ್ಯತೆ ಇಲ್ಲದೇ ಇರುವ ಉಪ ಪ್ರಧಾನ ವ್ಯವಸ್ಥಾಪಕರಿಂದ 10% ಪೂರ್ವೋತ್ತರ ತಪಾಸಣೆ ನಡೆಸಿ ವರದಿ ನೀಡುವುದನ್ನು ರದ್ದುಪಡಿಸಿ ಆದೇಶಿಸಿದೆ.

...2

ಮೇಲೆ ಓದಲಾದ ಉಲ್ಲೇಖ(3)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ತಮ್ಮ ಏಕ ಕಡತದಲ್ಲಿ, ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳ ಹಾಗೂ ಪಂಪ್ ಸೆಟ್ ಮತ್ತು ಪೂರಕ ಸಾಮಾಗ್ರಿಗಳ ಸರಬರಾಜು ಪರಿಶೀಲನೆ ಮಾಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ:ಸಕಇ 149 ಎಸ್ ಡಿಸಿ 2017, ದಿನಾಂಕ:22.04.2017ರ ಆದೇಶದಂತೆ ಸಮಗ್ರ ಮಾರ್ಗಸೂಚಿಯ ಕ್ರಮ ಸಂಖ್ಯೆ:09 ಮತ್ತು 20ರಲ್ಲಿ ನಮೂದಿಸಿರುವಂತೆ ತಾಲ್ಲೂಕು ಅಭಿವೃಧ್ಧಿ ಅಧಿಕಾರಿಗಳು ಶೇ.100 ರಷ್ಟು, ಜಿಲ್ಲಾ ವ್ಯವಸ್ಥಾಪಕರು ಶೇ.50ರಷ್ಟು ಮತ್ತು ಉಪ ಪ್ರಧಾನ ವ್ಯವಸ್ಥಾಪಕರು ಶೇ.10ರಷ್ಟು ಪರಿಶೀಲನೆ ಮಾಡಿ ಡಿಜಿಟಲ್ ಭಾವ ಚಿತ್ರದೊಂದಿಗೆ ವರದಿ ಸಲ್ಲಿಸುವುದು ಎಂದು ಆದೇಶಿಸಲಾಗಿದ್ದು, ದಿನಾಂಕ:31.10.2022ರಂದು ನಡೆದ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಜಿಲ್ಲಾ ವ್ಯವಸ್ಥಾಪಕರುಗಳಿಗೆ ಶೇ.50ರಷ್ಟು ಪರಿಶೀಲನೆ ಮಾಡಬೇಕಿದ್ದ ಪದ್ಧತಿಯನ್ನು ಶೇ.10ರಷ್ಟಕ್ಕೆ ಕಡಿತಗೊಳಿಸಿ ಐಚ್ಛಿಕಗೊಳಿಸುವುದರಿಂದ ಸದರಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಭ್ರಷ್ಟಾಚಾರದ ದೂರುಗಳನ್ನು ತಡೆಯಬಹುದಾಗಿದ್ದು, ಕಾರಣ ತಪಾಸಣಾ ಪದ್ಧತಿಯನ್ನು ಸರಳಿಕರಣಗೊಳಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಜಿಲ್ಲಾ ವ್ಯವಸ್ಥಾಪಕರುಗಳಿಗೆ ಶೇ.50ರಷ್ಟು ಕೊರೆದ ಬೋರ್‌ವೆಲ್, ಪಂಪ್ ಸೆಟ್ ಅಳವಡಿಸುವುದು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಯ ಬಗ್ಗೆ ತಪಾಸಣೆ ಮಾಡಬೇಕಿದ್ದ ಪದ್ಧತಿಯನ್ನು ಶೇ.10ರಷ್ಟಕ್ಕೆ ಕಡಿತಗೊಳಿಸಿ ತಪಾಸಣಾ ಮಿತಿಯನ್ನು ನಿಗದಿಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 96 ಎಸ್‌ಡಿಸಿ 2021, ಬೆಂಗಳೂರು, ದಿನಾಂಕ:01.12.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗಂಗಾ ಕಲ್ಯಾಣ ಯೋಜನೆಯಲ್ಲಿ ಸ್ವೀಕೃತವಾಗುತ್ತಿರುವ ಭ್ರಷ್ಟಾಚಾರದ ದೂರುಗಳನ್ನು ತಡೆಯಲು, ಪಾರದರ್ಶಕತೆಯನ್ನು ತಂದು ವಿಳಂಬ ನೀತಿಯನ್ನು ತಡೆಗಟ್ಟಲು ಮತ್ತು ತ್ವರಿತವಾಗಿ ಯೋಜನೆಯನ್ನು ಅನುಷ್ಠಾನ (Speedy Implementation) ಗೊಳಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ನೀಡಿರುವ 50%ರಷ್ಟು ಕೊರೆದ ಬೋರ್‌ವೆಲ್, ಪಂಪ್ ಸೆಟ್ ಅಳವಡಿಸುವುದು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಯ ಬಗ್ಗೆ ಪೂರ್ವೋತ್ತರ ತಪಾಸಣೆ ನಡೆಸಿ ವರದಿ ನೀಡಬೇಕಿದ್ದ ಪ್ರಮಾಣವನ್ನು ಕಡಿತಗೊಳಿಸಿ ತಪಾಸಣಾ ಮಿತಿಯನ್ನು ಶೇ.10ರಷ್ಟಕ್ಕೆ ನಿಗದಿಗೊಳಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಆದೇಶಿಸಿದೆ.

**<u>ಷರತ್ತುಗಳು:</u>**

1. ಈಗಾಗಲೇ 3ನೇ ವ್ಯಕ್ತಿ ತಪಾಸಣಾ ವ್ಯವಸ್ಥೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಬೋರ್‌ವೆಲ್, ಪಂಪ್ ಸೆಟ್ ಅಳವಡಿಸುವುದು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಯ ಬಗ್ಗೆ ತಪಾಸಣೆಯನ್ನು ಶೇ.100ರಷ್ಟು ಮಾಡುತ್ತಿರುವುದರಿಂದ. ಜಿಲ್ಲಾ ವ್ಯವಸ್ಥಾಪಕರುಗಳಿಗೆ ತಪಾಸಣಾ ಮಿತಿಯನ್ನು ಶೇ.10ರಷ್ಟಕ್ಕೆ ನಿಗಧಿಗೊಳಿಸಿದೆ.

2. ತಪಾಸಣಾ ಪದ್ಧತಿಯಲ್ಲಿ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಕೊರೆದ ಬೋರ್‌ವೆಲ್, ಪಂಪ್ ಸೆಟ್ ಅಳವಡಿಸುವುದು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಯ ಬಗ್ಗೆ ಮತ್ತು ತಪಾಸಣೆ ಸ್ಥಳವನ್ನು System/Software ಮೂಲಕ Random ಆಗಿ Generate ಮಾಡುವ ಪದ್ಧತಿಯನ್ನು ಅಳವಡಿಸಿಕೊಳ್ಳುವುದು.

3. ಸದರಿ 10% ತಪಾಸಣೆಯನ್ನು ಜಿಲ್ಲಾ ವ್ಯವಸ್ಥಾಪಕರುಗಳು ನಿಗದಿಪಡಿಸಿದ ಅವಧಿಯೊಳಗೆ ಕೈಗೊಳ್ಳುತ್ತಿರುವ ಬಗ್ಗೆ, ಸಂಬಂಧಪಟ್ಟ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮೇಲ್ವಿಚಾರಣೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

1.12.2022

(ವಿ. ಪ್ರಕಾಶ್ )
ಸರ್ಕಾರದ ಉಪ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು( ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ.
4. ವ್ಯವಸ್ಥಾಪಕ ನಿರ್ದೇಶಕರು, ಸಂಬಂಧಪಟ್ಟ ನಿಗಮ/ಸಂಸ್ಥೆಗಳು, ಸಮಾಜ ಕಲ್ಯಾಣ ಇಲಾಖೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ-3ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

****